# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 16

ಸ್ವಾಮಿ ನಿತ್ಯಸ್ಥಾನಂದ

**ಸ**ಮಾಜವು ತನ್ನದೇ ಆದ ನಿಯಮಕ್ಕೆ ಅನುಸಾರವಾಗಿ ಮುಂದುವರಿಯುತ್ತದೆ. ಅದನ್ನು ನಾವು ಬದಲಾಯಿಸಲಾಗುವುದಿಲ್ಲ. ನಾವು ಜಗತ್ತಿಗೆ ಸಹಾಯ ಮಾಡಬೇಕೆಂಬ ಪ್ರೇರಣೆಯೂ, ಮಾಡುವುದೂ ಆ ನಿಯಮಾನುಸಾರವಾಗಿಯೇ ನಡೆಯುತ್ತದೆ. ನಾನು ಮಾಡುತ್ತಿದ್ದೇನೆ ಎಂಬ ಕರ್ತೃತ್ವಭಾವ ಇರಬಾರದು. ಇದ್ದರೂ ನಮ್ಮಿಂದ ಕೆಲಸ ಮಾಡಿಸಿಕೊಳ್ಳಲು ಭಗವಂತನೇ ಅದನ್ನು ನಮ್ಮಲ್ಲಿ ಇರಿಸಿರುವುದು. ಭಗವದ್ಗೀತೆಯಲ್ಲಿ ಬರುವ ಒಂದು ಪ್ರಸಿದ್ಧ ಶ್ಲೋಕವನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು: *(ಗೀತೆ, ೧೮.೧೪)*

**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।**
**ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥**

‘‘ಒಂದು ಕಾರ್ಯಸಾಧನೆ ಆಗಬೇಕಾದರೆ ಈ ಕೆಳಗಿನ ಅಂಶಗಳು ಇರಬೇಕು. ಹಿನ್ನೆಲೆ, ಮಾಡುವವನು, ವಿವಿಧ ಉಪಕರಣಗಳು, ವಿವಿಧ ಕ್ರಿಯೆಗಳು ಮತ್ತು ದೈವ. ಇವಿಷ್ಟೂ ಕೂಡಿದಾಗ ಕಾರ್ಯಸಾಧನೆಯಾಗುತ್ತದೆ.’’ ಪ್ರತಿಯೊಂದು ಕಾರ್ಯಕ್ಕೂ ಒಂದು ಸೂಕ್ತ ಹಿನ್ನೆಲೆ ಇರಬೇಕಾಗುತ್ತದೆ, ಅದರ ಆಧಾರದ ಮೇಲೆಯೇ ಕಾರ್ಯ ಮುಂದುವರಿಯುತ್ತದೆ. ಅನಂತರ ಕಾರ್ಯ ಮಾಡುವವನೂ (ಕರ್ತಾ) ಇರಬೇಕಾಗುತ್ತದೆ. ಕೃಷಿಯ ಕಾರ್ಯವಾಗಬೇಕಾದರೆ, ಸೂಕ್ತವಾದ ಸ್ಥಳ ಬೇಕು, ಅನಂತರ ಕೃಷಿಕನು ಬೇಕು. ಅದಕ್ಕೆ ಬೇಕಾದ ನೇಗಿಲು ಮುಂತಾದ ಉಪಕರಣಗಳು ಬೇಕು. ಹಾಗೇಯೇ ಅನೇಕರ ಚಟುವಟಿಕೆಯೂ ಅದರೊಂದಿಗೆ ಇರಬೇಕಾಗುತ್ತದೆ. ಇಷ್ಟೆಲ್ಲ ಇದ್ದರೂ ಮಳೆಯೇ ಬರದಿದ್ದರೆ ಏನೂ ನಡೆಯುವುದಿಲ್ಲ. ಹೀಗೆ ಅನೇಕ ಅಂಶಗಳು ಸೇರಿದಾಗಲೇ ಒಂದು ಕಾರ್ಯ ಸಾಧನೆಯಾಗುವುದರಿಂದ ನನ್ನಿಂದಲೇ ಎಲ್ಲ ಆಗಿರುವುದೆಂದು ಅಹಂಕಾರವನ್ನು ಮುಂದೆ ಮಾಡುವುದು ತಪ್ಪು. ಮೇಲಿನ ಶ್ಲೋಕದಿಂದ ಈ ಕೆಳಗಿನ ಅಂಶಗಳನ್ನು ಕಲಿಯುತ್ತೇವೆ:

೧) ಹಲವಾರು ಅಂಶಗಳು ಸೇರಿ ಒಂದು ಕೆಲಸವಾಗುತ್ತದೆ. ಆದ್ದರಿಂದ ಕರ್ತೃತ್ವವನ್ನು ಮುಂದೆ ಮಾಡಬಾರದು.

೨) ಒಂದು ಕೆಲಸದಲ್ಲಿ ಎಲ್ಲ ಅಂಶಗಳೂ ಮುಖ್ಯ, ಯಾವುದನ್ನೂ ಕಡೆಗಣಿಸುವಂತಿಲ್ಲ.

೩) ಎಲ್ಲವೂ ತನ್ನ ಕೈಯಲ್ಲಿಲ್ಲ ಎಂಬ ನಮ್ರತೆಯ ಭಾವವಿರಬೇಕು.



೪) ಸೋಲು ಗೆಲುವುಗಳನ್ನು ಸಮನಾಗಿ ಸ್ವೀಕರಿಸಬೇಕು.

೫) ವಾಸ್ತವ ದೃಷ್ಟಿಯನ್ನು ಬೆಳಸಿಕೊಳ್ಳಬೇಕು, ಮತ್ತು ಆಶಾವಾದವಿರಬೇಕು.

## ಮುಂದೆ ಹೋಗು

ಶ್ರೀರಾಮಕೃಷ್ಣರು ಮುಂದುವರಿಸುತ್ತಾರೆ (ವಿದ್ಯಾಸಾಗರನನ್ನು ಕುರಿತು):

‘‘ನಿನ್ನ ಅಂತರ್ಯದಲ್ಲಿ ಚಿನ್ನದ ಗಟ್ಟಿ ಇದೆ; ಆದರೆ ಅದು ನಿನಗೆ ಗೊತ್ತಿಲ್ಲ. ಅದರ ಮೇಲೆ ಸ್ವಲ್ಪ ಮಣ್ಣು ಮುಚ್ಚಿಕೊಂಡಿದೆ. ಅದರ ನೆಲೆ ನಿನಗೆ ಸಿಕ್ಕಿಬಿಟ್ಟಿತು ಎಂದರೆ ನಿನ್ನ ಈ ಕೆಲಸಕಾರ್ಯಗಳೆಲ್ಲ ಕಡಿಮೆಯಾಗಿ ಹೋಗುತ್ತವೆ.... ಮುಂದೆ ಹೋಗು. ಒಮ್ಮೆ ಒಬ್ಬ ಸೌದೆ ಕಡಿಯುವವ ಸೌದೆ ತರಲು ಕಾಡಿಗೆ ಹೋದ. ಅಲ್ಲೊಬ್ಬ ಬ್ರಹ್ಮಚಾರಿ ಹೇಳಿದ, ‘ಮುಂದೆ ಹೋಗು’. ಮುಂದೆ ಹೋಗಿ ನೋಡುತ್ತಾನೆ, ಚಂದನದ ಕಾಡು. ಕೆಲವು ದಿನಗಳಾದ ಮೇಲೆ ಯೋಚನೆ ಬಂತು, ‘ಬ್ರಹ್ಮಚಾರಿ ನನಗೆ ಮುಂದೆ ಹೋಗುವಂತೆ ಹೇಳಿದನೇ ವಿನಾ, ಈ ಚಂದನದ ಕಾಡಿನವರೆಗೆ ಮಾತ್ರ ಹೋಗು ಅಂತಲೇನೂ ಹೇಳಲಿಲ್ಲವಲ್ಲ’. ಅಲ್ಲಿಂದ

ಮುಂದೆ ಹೋಗಿ ನೋಡುತ್ತಾನೆ, ಬೆಳ್ಳಿಯ ಗಣಿ. ಕೆಲವು ದಿನಗಳಾದ ಮೇಲೆ ಇನ್ನೂ ಮುಂದಕ್ಕೆ ಹೋಗಿ ನೋಡುತ್ತಾನೆ, ಚಿನ್ನದ ಗಣಿ, ಅದರಿಂದ ಮುಂದಕ್ಕೆ ಹೀರ, ಮಾಣಿಕ್ಯ ಇವುಗಳ ಗಣಿ. ಇವನ್ನೆಲ್ಲ ಪಡೆದುಕೊಂಡು ದೊಡ್ಡ ಐಶ್ವರ್ಯವಂತನಾಗಿಬಿಟ್ಟ.

ಹೀಗೆಯೇ ನಾವು ಜೀವನದಲ್ಲಿ ಮುಂದುವರಿಯುತ್ತಿರಬೇಕೆಂಬುದೇ ಶ್ರೀರಾಮಕೃಷ್ಣರ ಅಭಿಪ್ರಾಯ. ಅಲ್ಪದರಲ್ಲಿಯೇ ತೃಪ್ತರಾಗಿ ಉಳಿಯಬಾರದು. ಶ್ರೀರಾಮಕೃಷ್ಣರು ಇದನ್ನು ಇನ್ನೊಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ. ರೈತರು ಧಾನ್ಯದ ಕಣಜದ ಮುಂದೆ ಕೆಲವು ಕಾಳುಗಳನ್ನು ಸುರಿದಿರುತ್ತಾರೆ. ಇಲಿಗಳು ಆ ಕಾಳುಗಳನ್ನು ತಿಂದು ತೃಪ್ತರಾಗಿ ಹೊರಟು ಹೋಗುತ್ತವೆ. ಕಣಜವನ್ನು ಕೊರೆದು ಹಾಳುಮಾಡುವುದಕ್ಕೆ ಹೋಗುವುದಿಲ್ಲ. ಅವು ಕಣಜವನ್ನು ಮುಟ್ಟದಿರಲೆಂಬುದೇ ರೈತರ ಉದ್ದೇಶವೂ ಆಗಿರುತ್ತದೆ. ಇಲಿಗಳು ಕೆಲವೇ ಕಾಳುಗಳಿಂದ ತೃಪ್ತರಾಗಿ ಕಣಜದ ತುಂಬ ಇರುವ ಧಾನ್ಯದ ರಾಶಿಯನ್ನೇ ಮರೆತುಬಿಡುತ್ತವೆ.

ತೊಂದರೆ ತಾಪತ್ರಯಗಳಿಂದ ದೂರವಿರಬೇಕೆಂಬ ಪ್ರವೃತ್ತಿ ಅನೇಕರಲ್ಲಿ ಇರುತ್ತದೆ. ಇದರಿಂದ ಅವರು ಜೀವನದಲ್ಲಿ ಏನನ್ನೂ ಸಾಧಿಸದೆ ಅಲ್ಪತೃಪ್ತರಾಗಿಯೇ ಉಳಿಯುತ್ತಾರೆ. ಅಬ್ರಾಹಂ ಮಾಸ್ಲೋ ಎಂಬ ಮನಶ್ಶಾಸ್ತ್ರಜ್ಞರು ಇದನ್ನು Jonah Complex ಎಂದು ಕರೆಯುತ್ತಾರೆ. Mechanism of escape (ತಪ್ಪಿಸಿಕೊಳ್ಳುವ ಪ್ರವೃತ್ತಿ) ಎಂದು ಎರಿಕ್ ಫ್ರೋಮ್ ಕರೆಯುತ್ತಾರೆ. ಅಡೆತಡೆಗಳಿಗೆ ಹೆದರುವುದೇ ಪ್ರಗತಿಗೆ ಇರುವ ಅಡೆತಡೆ. ಭಾರತದಲ್ಲಿ ಜನಸಾಮಾನ್ಯರ ಸ್ಥಿತಿಗತಿಯನ್ನು ಉತ್ತಮಪಡಿಸುವುದಕ್ಕೆ ಇರುವ ದೊಡ್ಡಬಾಧಕವೇ ಅವರಿಗೆ ನಾವು ಉತ್ತಮರಾಗಬೇಕೆಂಬ ಮನೋಭಾವ ಇಲ್ಲದಿರುವುದು, ಇರುವ ಸ್ಥಿತಿಯಲ್ಲೇ ಸಂತುಷ್ಟರಾಗಿ ಇರುವುದು. ಯಹೂದಿಗಳು ಒಂದು ಕಾಲದಲ್ಲಿ ಈಜಿಪ್ಟ್ ದೇಶದಲ್ಲಿ ಸೆರೆಯಾಳುಗಳಾಗಿದ್ದರು. ತುಂಬ ಶೋಚನೀಯ ಸ್ಥಿತಿಯಲ್ಲಿದ್ದರು. ಪ್ರವಾದಿ ಮೋಸೆಸ್ ಅವರನ್ನು ಈಜಿಪ್ಟ್ ರಾಜನಿಂದ ಬಿಡಿಸಿಕೊಂಡು ಅವರ ಮಾತೃದೇಶವಾದ ಇಸ್ರೇಲಿಗೆ ಕರೆದುಕೊಂಡು ಬಂದನು. ಆದರೆ ಬಂದವರು ಕೇವಲ ಶೇಕಡ ೨೦ರಷ್ಟು ಮಾತ್ರ. ಉಳಿದವರು ಆ ಗುಲಾಮಗಿರಿಯಲ್ಲಿಯೇ ತೃಪ್ತರಾಗಿ ಉಳಿದುಕೊಂಡರಂತೆ. ಈ ರೀತಿಯ ಮನಸ್ಥಿತಿಯನ್ನು ಅರ್ಥಶಾಸ್ತ್ರದಲ್ಲಿ Pathetic Contentment (ಶೋಚನೀಯ ಸಂತೋಷ) ಎಂದು ಕರೆಯುತ್ತಾರೆ. 'ಮುಂದೆ ಹೋಗು' ಎಂಬ ಶ್ರೀರಾಮಕೃಷ್ಣರ ಕರೆಯು ಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. *(ಮುಂದುವರಿಯುವುದು)*

## 'ಶ್ರೀರಾಮಕೃಷ್ಣರು ಈಗಲೂ ಬದುಕಿದ್ದರೆ.. '

ಶ್ರೀರಾಮಕೃಷ್ಣರ ಮಹಾಸಮಾಧಿಯಾಗಿ, ಕೆಲವು ವರ್ಷಗಳ ನಂತರ ಅವರ ಶಿಷ್ಯ ಕೇದಾರನಾಥನಿಗೆ ಒಂದೇ ಚಿಂತೆ : 'ಶ್ರೀರಾಮಕೃಷ್ಣರು ಈಗಲೂ ಬದುಕಿದ್ದರೆ.. ' ಎಂದು. ಒಂದು ಸಲ ಅವನಿಗೆ ನೆನಪಾಯಿತು, ಶ್ರೀರಾಮಕೃಷ್ಣರ ಶಿಷ್ಯ ರಾಮಚಂದ್ರ ದತ್ತನು ಅವರಿಗಾಗಿ ಒಂದು ದೇವಾಲಯವನ್ನು ಕಟ್ಟಿಸಿರುವುದಾಗಿ. ಅವನಿಗೆ ಕೂಡಲೇ ಅಲ್ಲಿಗೆ ಹೋಗಬೇಕೆನಿಸಿತು. ಆದರೆ ಅಲ್ಲಿಗೆ ಹೋಗುವ ದಾರಿ ತಿಳಿಯದಲ್ಲ! ಅದು ಕಾಂಕುರಗಾಛಿಯ ಯೋಗೋದ್ಯಾನದಲ್ಲಿದೆ; ಅದು ನಾರ್ಕೇಲದಂಗ ಎಂಬಲ್ಲಿಗೆ ಸಮೀಪ ಎಂದವನು ಕೇಳಿದ್ದ. ಕೊನೆಗೆ, 'ಶ್ರೀರಾಮಕೃಷ್ಣರು ಈಗಲೂ ಬದುಕಿದ್ದರೆ.. ' ಎಂದು ಚಿಂತಿಸುತ್ತಾ ಅಲ್ಲಿಗೆ ನಡೆಯತೊಡಗಿದ.

ಮುಂದಿನ ಕಥೆಯನ್ನು ಅವನೇ ವರ್ಣಿಸುತ್ತಾನೆ: ''ಅದು ಬೇಸಗೆಯ ಮಧ್ಯಾಹ್ನ. ಸುಂದರವಾದ ಉದ್ಯಾನ ಕಾಣಿಸಿತು. ಅದೇ ಯೋಗೋದ್ಯಾನವಿರಬೇಕು ಅನ್ನಿಸಿತು. ಒಂದು ಬಿದಿರಿನ ತೋಟ, ಅದೇ ನಾನು ಹೋಗಬೇಕಿದ್ದ ಸ್ಥಳವೆನ್ನಿಸಿತು. ತೋಟದ ಬಾಗಿಲು ತೆರೆದಿತ್ತು. ಒಳಕ್ಕೆ ಹೋದೆ. ಅಲ್ಲೊಂದು ಕೊಳ, ಕೊಳದ ಸುತ್ತ ದಾರಿ, ಒಂದು ಕಟ್ಟಡ.. ದ್ವಾರ ತೆರೆದಿತ್ತು. ನನಗೆ ನಂಬಲಾಗಲಿಲ್ಲ! ಶ್ರೀರಾಮಕೃಷ್ಣರನ್ನು ಅಲ್ಲಿ ಕಂಡೆ. ಅವರ ಪ್ರತಿಕೃತಿಯಂತೆಯೇ ಇದ್ದ ಅಮೃತಶಿಲೆಯ ವಿಗ್ರಹ! ನನ್ನ ಆನಂದಕ್ಕೆ ಪಾರವೇ ಇಲ್ಲ. ಅವರು ಹೇಗೆ ವಸ್ತ್ರ ತೊಡುತ್ತಿದ್ದರೋ, ಹಾಗೆಯೇ ತೊಡಿಸಲಾಗಿತ್ತು. ಅವರ ಕೂದಲು ಹಾರಾಡುತ್ತಿದ್ದಂತೆ ಕೂಡ ನನಗೆ ಅನ್ನಿಸಿತು. ಅವರನ್ನು ದಕ್ಷಿಣೇಶ್ವರದಲ್ಲಿ ಕಂಡಿದ್ದ ಹಾಗೆಯೇ ಕಂಡೆ. ನಾನು ಪರವಶನಾದೆ.

''ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲೊಬ್ಬರು ಅರ್ಚಕರು ಕಾಣಿಸಿಕೊಂಡರು. ಅವರು ಕೇಳಿದರು, 'ಯಾರು ನೀವು? ನಿಮಗೇನು ಬೇಕು?' ನಾನಂದೆ, 'ನಾನು ಶ್ರೀರಾಮಕೃಷ್ಣರನ್ನು ಕಂಡೆ. ಇದು ರಾಮಚಂದ್ರ ದತ್ತರ ಉದ್ಯಾನ ಮನೆಯೆ?' ಅವರು ಆಶ್ಚರ್ಯದಿಂದ, 'ಏನಂದಿರಿ?' ಎಂದು ಕೇಳಿದರು. ನಾನಂದೆ, 'ನಾನು ಶ್ರೀರಾಮಕೃಷ್ಣರ ಪ್ರತಿಮೆಯನ್ನು ಕಂಡೆ.' ಅವರು, 'ಏನು ಪ್ರತಿಮೆ? ಎಲ್ಲಿ ಕಂಡಿರಿ? ನಾನೇ ಪೂಜೆ ಮಾಡಿ, ಒಂದು ಗಂಟೆ ಮೊದಲು ಮಂದಿರಕ್ಕೆ ಬೀಗ ಹಾಕಿ ಹೋದೆ. ನೀವು ಹೇಗೆ ವಿಗ್ರಹ ನೋಡಿದಿರಿ?' ಇಬ್ಬರೂ ಮಂದಿರದ ಒಳಕ್ಕೆ ಹೋದೆವು. ನನಗೆ ನಂಬಲಾಗಲಿಲ್ಲ. ಅದೇ ಮಂದಿರದ ಮೂರ್ತಿಯನ್ನು ನಾನು ಕಂಡಿದ್ದೆ. ಅದು ದರ್ಶನವೆ? ಅರ್ಚಕರು ಹೇಳಿದರು, ಅದೇ ರಾಮಚಂದ್ರ ದತ್ತರ ಉದ್ಯಾನದ ಮನೆ ಎಂಬುದಾಗಿ. ಅವರು ಕೊಟ್ಟ ಪ್ರಸಾದವನ್ನು ಸ್ವೀಕರಿಸಿ, ದಕ್ಷಿಣೇಶ್ವರದ ಕಡೆಗೆ ಹೊರಟೆ. ಆನಂದತುಂದಿಲನಾದ ನನ್ನ ಮನಸ್ಸಿನಲ್ಲಿ ಮತ್ತೆ ಆಲೋಚನೆ ತುಂಬಿಕೊಂಡಿತು, 'ಶ್ರೀರಾಮಕೃಷ್ಣರು ನನ್ನ ಕರೆಯನ್ನು ಕೇಳಿಸಿಕೊಂಡು ನನ್ನ ಆಸೆ ಪೂರೈಸಿದರೆ? ಅವರು ಇಂದೂ ಬದುಕಿದ್ದರೆ..' ಎಂದು.''

*( 'Sri Ramakrishna Saves' ಗ್ರಂಥದಿಂದ, ಪು. ೬೯)*